# ದೇಶದಲ್ಲಿ ಶೇ.33ರಷ್ಟು ಮೀಸಲಾತಿ ಜಾರಿಯಾದರೆ ಮಹಿಳೆಗೆ ಅಧಿಕಾರ

## ಸಮಾವೇಶದಲ್ಲಿ ಹಿರಿಯ ವಕೀಲ ಪ್ರೊ. ರವಿವರ್ಮ ಕುಮಾರ್ ಅಭಿಮತ

• **ಕನ್ನಡಪ್ರಭ ವಾರ್ತೆ** ಮೈಸೂರು

ದೇಶದಲ್ಲಿ ಮಹಿಳೆಯರಿಗೆ ಶೇ. 33 ರಷ್ಟು ಮೀಸಲಾತಿ ನೀಡಬೇಕು ಎಂಬ ವಿಷಯ ಪ್ರಸ್ತಾಪವಾಗುತ್ತಿದ್ದು, ಇದು ಜಾರಿಯಾದರೆ ಮಹಿಳೆಯರು ಆಡಳಿತ ಚುಕ್ಕಾಣಿ ಹಿಡಿಯುವುದಾಗಿ ಹಿರಿಯ ವಕೀಲ ಪ್ರೊ. ರವಿವರ್ಮ ಕುಮಾರ್ ಹೇಳಿದರು.

ನಗರದ ಕಲಾಮಂದಿರದಲ್ಲಿ ಮೈಸೂರು ಲೇಡೀಸ್ ಅಸೋಸಿಯೇಷನ್ ಬೆಳ್ಳಿಹಬ್ಬ ಅಂಗವಾಗಿ ಆಯೋಜಿಸಿದ್ದ ಮಹಿಳೆಯರ ಸಬಲೀಕರಣಕ್ಕಾಗಿ ಮಹಿಳಾ ಸಮಾವೇಶದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ವಿಶ್ವದಾದ್ಯಂತ ಈ ಹಿಂದೆ ಶೋಷಣೆ, ತುಳಿತಕ್ಕೆ ಒಳಗಾಗಿದ್ದ ಮಹಿಳೆಯರು ಈಗ ಬದಲಾಗುತ್ತಿದ್ದಾರೆ. ಈಗ ಎಲ್ಲಾ ಕ್ಷೇತ್ರಗಳಲ್ಲೂ ಮಹಿಳೆಯರು ಸಾಧನೆ ಮಾಡುತ್ತಿದ್ದಾರೆ ಎಂದರು.

ಶಾಸಕ ಕೆ. ಹರೀಶ್ ಗೌಡ ಮಾತನಾಡಿ. ಅಬಲೆಯರನ್ನು ಸಬಲೆಯರನ್ನಾಗಿಸುವ ನಿಟ್ಟಿನಲ್ಲಿ ಮಹಿಳಾ ಸಂಘಟನೆಗಳು ಕಾರ್ಯಕ್ರಮ ರೂಪಿಸಬೇಕು. ತಾಳ್ಮೆ ಹಾಗೂ ಬುದ್ಧಿವಂತಿಕೆ ಹೆಚ್ಚಾಗಿರುವುದರಿಂದ ಸ್ತ್ರೀಯರು ಉತ್ತಮವಾಗಿ ಆಡಳಿತ ನಿಭಾಯಿಸಬಲ್ಲರು. ನಮ್ಮ ಸರ್ಕಾರ ಗೃಹಲಕ್ಷ್ಮೀ ಯೋಜನೆಯಲ್ಲಿ ತಿಂಗಳಿಗೆ ನೀಡುತ್ತಿರುವ 2 ಸಾವಿರ ರೂ.ಗಳಿಂದ ಫಲಾನುವಿಗಳು ಕುಟುಂಬದ ನಿರ್ವಹಣೆ ಮಾಡುತ್ತಿದ್ದಾರೆ ಎಂದು ಅವರು ಹೇಳಿದರು.

ಮಾಜಿ ಸಚಿವೆ ಗೀತಾ ಮಹದೇವಪ್ರಸಾದ್, ಎಡಿಸಿ ಆರ್. ಐಶ್ವರ್ಯ, ವಕೀಲೆ ಸುಮನಾ ಅವರನ್ನು ಸನ್ಮಾನಿಸಿದರು. ವಿವಿಧ ಸ್ಪರ್ಧೆಯಲ್ಲಿ ವಿಜೇತರಾದ ಮಹಿಳೆಯರನ್ನು ಸನ್ಮಾನಿಸಲಾಯಿತು.

ಗಣಪತಿ ಸಚ್ಚಿದಾನಂದ ಆಶ್ರಮದ ಕಿರಿಯ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಸಾನ್ನಿಧ್ಯವಹಿಸಿದ್ದರು. ಕೆಪಿಸಿಸಿ ಸದಸ್ಯ ಎಚ್.ವಿ. ರಾಜೀವ್, ಸಂಘದ ಅಧ್ಯಕ್ಷೆ ಮಲ್ಲಿಗೆ ವೀರೇಶ್, ಉಪಾಧ್ಯಕ್ಷೆ ಪವಿತ್ರಾ ಮಲ್ಲಿಕಾರ್ಜುನ್, ಪದಾಧಿಕಾರಿಗಳಾದ ಪೂರ್ಣಿಮಾ ರಮೇಶ್, ಪುಷ್ಪಾ ನಾಗರಾಜ್, ವಿದ್ಯಾ ಶಿವಕುಮಾರ್, ಚಂದ್ರಕಲಾ ಶಿವರಾಜ್ ಇದ್ದರು.

# ರಸ್ತೆ ಅಪಘಾತ: ಕಾರು ಚಾಲಕ ಸಾವು, ಐವರು ಬಿಇಒಗಳಿಗೆ ಗಾಯ

• **ಕನ್ನಡಪ್ರಭ ವಾರ್ತೆ** ಎಚ್.ಡಿ. ಕೋಟೆ

ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರು ಬೆಂಗಳೂರಿನಲ್ಲಿ ಕರೆದಿದ್ದ ಸಭೆಯಲ್ಲಿ ಪಾಲ್ಗೊಳ್ಳಲು ತೆರಳುತ್ತಿದ್ದಾಗ ತ ಕಾರು ಅಪಘಾತಕ್ಕೆ ಒಳಗಾಗಿ ಚಾಲಕ ಮೃತ ಪಟ್ಟು, ಮೈಸೂರು ಜಿಲ್ಲೆಯ ಐವರು ಬಿಇಒಗಳು ಗಾಯಗೊಂಡಿದ್ದಾರೆ.

ಮದ್ದೂರು- ಚನ್ನಪಟ್ಟಣ ನಡುವೆ ಈ ಅಪಘಾತವಾಗಿದೆ. ಬೆಂಗಳೂರು - ಮೈಸೂರ್‌ಎಕ್ಸ್‌ಪ್ರೆಸ್ ವೇನ ವೈಶಾಲಿ ಹೋಟೆಲ್‌ಬಳಿ ಕಾರಿಗೂಕ್ಯಾಂಟರಿಗೂ ನಡುವೆ ಅಪಘಾತ ಸಂಭವಿಸಿದೆ.

ಘಟನೆಯಲ್ಲಿ ಚಾಲಕ ಮಲ್ಲೇಶ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಎಲ್ಲಾ ಬಿಇಒ ಗಳು ಪ್ರಾಣಾಪಾಯದಿಂದ ಪಾರಾಗಿದ್ದು, ಗಾಯಗೊಂಡಿದ್ದಾರೆ.

ಮುಂದೆ ಕುಳಿತಿದ್ದ ಮೈಸೂರು ಉತ್ತರ ವಲಯ ಬಿಇಒ ರೇವಣ್ಣ ಅವರಿಗೆ ಎರಡು ಕಾಲು ಮತ್ತು ಎರಡು ತೋಳುಗೆ ಹೆಚ್ಚಿನ ಗಾಯವಾಗಿದೆ. ದಕ್ಷಿಣ ವಲಯ ಬಿಇಒ ಕೃಷ್ಣ ಅವರ ತಲೆ ಮತ್ತು ತೋಳಿಗೆಹೆಚ್ಚಿನಗಾಯವಾಗಿದೆ. ಮೈಸೂರು ಗ್ರಾ ಮಾಂತರ ಬಿಇಒ ಪ್ರಕಾಶ್ ಅವರ ಬೆನ್ನುಮೂಳೆಗೆ ತೀವ್ರ ಗಾಯವಾಗಿದೆ.

ಎಚ್.ಡಿ. ಕೋಟೆ ತಾ ಲೂಕು ಬಿಇಒ ರಾಜು ಮತ್ತು ನಂಜ ನಗೂಡು ತಾಲೂಕು ಬಿಇಒ ಮಹೇಶ್ ಅವರಿಗೆ ಸಣ್ಣ ಪುಟ್ಟ ಗಾಯವಾಗಿದೆ.

ಗಾಯಾಳುಗಳನ್ನು ಸಮೀಪದ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿದ್ದು, ಬಿಇಒ ಪ್ರಕಾಶ್ ಅವರನ್ನು ಮಂಡ್ಯ ಆಸ್ಪತ್ರೆಗೆ, ಪ್ರಕಾಶ್‌ಅವರನ್ನು ಮೈಸೂರಿನ ಮಣಿಪಾಲ್‌ಆಸ್ಪತ್ರೆಗೆ ಹಾಗೂ ರಾಜು, ಕೃಷ್ಣ ಮತ್ತು ಮಹೇಶ್ ಅವರನ್ನು ಮೈಸೂರಿನ ಅಪೋಲೋ ಆಸ್ಪತ್ರೆಗೆ ದಾಖಲಿಸಲಾಗಿದೆ. ಈ ಸುದ್ದಿ ತಿಳಿದು ಡಿಡಿಪಿಐ ಡಿ. ಉದಯ್ ಕುಮಾರ್ ಅಪಘಾತ ಸ್ಥಳಕ್ಕೆ ಭೇಟಿ ನೀಡಿ ಗಾಯಾಳುಗಳ ಆರೋಗ್ಯ ವಿಚಾರಿಸಿದ್ದಾರೆ.

# 5 ವರ್ಷಕ್ಕೊಮ್ಮೆ ಕನಿಷ್ಠ ವೇತನ ಪರಿಷ್ಕರಿಸಿ:ಎಚ್.ಆರ್. ಶೇಷಾದ್ರಿ

• **ಕನ್ನಡಪ್ರಭ ವಾರ್ತೆ** ಮೈಸೂರು

ಕಾರ್ಮಿಕರ ಹಿತಾಸಕ್ತಿಗಾಗಿ ಐದು ವರ್ಷಕ್ಕೊಮ್ಮೆ ಕನಿಷ್ಠ ವೇತನ ಪರಿಷ್ಕರಣೆಯಾಗಬೇಕು. ಕಾರ್ಮಿಕರ ಕಲ್ಯಾಣಕ್ಕೆ ಆದ್ಯತೆ ನೀಡಬೇಕು ಎಂದು ಎಐಟಿಯುಸಿ ಪ್ರಧಾನ ಕಾರ್ಯದರ್ಶಿ ಎಚ್.ಆರ್. ಶೇಷಾದ್ರಿ ಆಗ್ರಹಿಸಿದರು.

ನಗರದ ಎಂಜಿನಿಯರುಗಳ ಸಂಸ್ಥೆಯ ಸಭಾಂಗಣದಲ್ಲಿ ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್ (ಎಐಟಿಯುಸಿ) ಜಿಲ್ಲಾ ಘಟಕವು ಭಾನುವಾರ ಆಯೋಜಿಸಿದ್ದ 12ನೇ ಜಿಲ್ಲಾ ಸಮ್ಮೇಳನದಲ್ಲಿ ಮಾತನಾಡಿದ ಅವರು, 2023ರಲ್ಲಿ ಕನಿಷ್ಠ ವೇತನ ಪರಿಷ್ಕರಣೆ ಆಗಬೇಕಿತ್ತು. ಪ್ರತೀ ಐದು ವರ್ಷಕ್ಕೊಮ್ಮೆ ಶೇ.10 ರಷ್ಟು ವೇತನ ಪರಿಷ್ಕರಣೆ ಆಗಬೇಕು. ಆದರೆ, ಇದುವರೆವಿಗೂ ಸರ್ಕಾರ ಪರಿಷ್ಕರಣೆ ಮಾಡಿಲ್ಲ. ಹೀಗಾಗಿ, ನಾವು ಸುಮ್ಮನೆ ಕೂರಬಾರದು ಎಂದರು.

ಸರ್ಕಾರಗಳು ನಿರ್ಲಕ್ಷ್ಯ ಧೋರಣೆ ಅನುಸರಿಸುವ ಮೂಲಕ ಕಾರ್ಮಿಕರ ಹಿತಾಸಕ್ತಿ ಕಡೆಗಣಿಸುತ್ತಿವೆ. ಕಾರ್ಮಿಕರ ಹಿತಾಸಕ್ತಿ ರಕ್ಷಣೆಗೆ, ಸಾಮಾಜಿಕ ಭದ್ರತೆಗೆ ಸರ್ಕಾರಗಳ ವಿರುದ್ಧ ನಾವು ಪ್ರಬಲ ಹೋರಾಟ ರೂಪಿಸುವ ಅಗತ್ಯವಿದೆ. ಸಂಘಟನೆಗಳು ಗಟ್ಟಿಯಾಗುವ ಮೂಲಕ ತಮ್ಮ ಬಲವನ್ನು ಆಳುವ ಸರ್ಕಾರಕ್ಕೆ ತೋರಿಸಬೇಕು. ಇಲ್ಲವಾದಲ್ಲಿ ಕಾರ್ಮಿಕರಿಗೆ ನಿರಂತರವಾಗಿ ಅನ್ಯಾಯವಾಗಲಿದೆ. ಹೀಗಾಗಿ, ಬೇಡಿಕೆ ಈಡೇರಿಕೆ, ಕಾರ್ಮಿಕರ ಹಕ್ಕುಗಳನ್ನು ರಕ್ಷಿಸಲು ಬಲ ಪ್ರದರ್ಶಿಸುವುದೊಂದೇ ದಾರಿ ಎಂದು ಅವರು ತಿಳಿಸಿದರು. ಎಐಟಿಯುಸಿ ಜಿಲ್ಲಾಧ್ಯಕ್ಷ ಎನ್.ಕೆ. ದೇವದಾಸ್, ಉಪ ಪ್ರಧಾನ ಕಾರ್ಯದರ್ಶಿ ಎಚ್.ಬಿ. ರಾಮಕೃಷ್ಣ, ಕಾರ್ಯಾಧ್ಯಕ್ಷ ರೇವಣ್ಣ, ಉಪಾಧ್ಯಕ್ಷ ಡಿ. ಜಗನ್ನಾಥ್, ವೈ. ಮಹದೇವಮ್ಮ, ಕಾರ್ಯದರ್ಶಿ ಕೆ.ಜೆ. ಸೋಮರಾಜೇ ಅರಸ್ ಮೊದಲಾದವರು ಇದ್ದರು.


## ಭಾರತೀಯ ಸ್ಟೇಟ್ ಬ್ಯಾಂಕ್

ಗೃಹ ಸಾಲ ಕೇಂದ್ರ
ಶ್ರೀ ಮೈಲಾರ ಆರ್ಕೆಡ್, ಗಗನಚುಂಬಿ ಜೋಡಿ ರಸ್ತೆ, ಕುವೆಂಪುನಗರ, ಮೈಸೂರು-570023.

**ಸ್ವಾಧೀನ ಪ್ರಕಟಣೆ ನಿಯಮ 8 (1)**

ಹಣಕಾಸು ಸ್ವತ್ತುಗಳ ಪ್ರಭೂತೀಕರಣ ಮತ್ತು ಸ್ವಾಧೀನಕರಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಅಧಿನಿಯಮ 2002 (Securitization Act 2002) ರ ಅಡಿಯಲ್ಲಿ ಕಲಂ 13(12) ರ ನಿಯಮ 3 ರಲ್ಲಿನ ಭದ್ರತಾ ಹಿತಾಸಕ್ತಿ ಜಾರಿ ಕಾಯಿದೆ 2002 ಅನುಸಾರ ನೀಡಲಾದ ಅಧಿಕಾರವನ್ನು ಚಲಾಯಿಸಿ, ಈ ಕೆಳಗೆ ಸಹಿ ಮಾಡಿರುವ, ಭಾರತೀಯ ಸ್ಟೇಟ್ ಬ್ಯಾಂಕ್, ಇದರ ಅಧಿಕೃತ ಅಧಿಕಾರಿಯಾಗಿದ್ದು ತಗಾದೆ ನೋಟೀಸನ್ನು ಈ ಕೆಳಗೆ ತಿಳಿಸಿದ ದಿನಾಂಕದಂದು ಈ ಕೆಳಕಂಡ ಸಾಲಗಾರರಿಗೆ / ಅಡಮಾನದಾರರಿಗೆ ನೀಡಿ, ಅದರಲ್ಲಿ ತಿಳಿಸಲಾದ ಮೊತ್ತವನ್ನು ನೋಟಿಸು ತಲುಪಿದ 60 ದಿನಗಳ ಒಳಗೆ ಮರುಪಾವತಿ ಮಾಡುವಂತೆ ತಿಳಿಸಲಾಗಿದೆ.
ಸಾಲಗಾರ / ಅಡಮಾನದಾರರು ಡಿಮ್ಯಾಂಡ್ ನೋಟೀಸ್‌ನಲ್ಲಿ ತಿಳಿಸಿರುವಂತೆ ಬಾಕಿ ಮೊತ್ತವನ್ನು ಮರುಪಾವತಿ ಮಾಡಲು ವಿಫಲರಾಗಿರುವುದರಿಂದ ಸಾಲಗಾರರಿಗೆ / ಅಡಮಾನದಾರರಿಗೆ ಮತ್ತು ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ಸದರಿ ನಿಯಮಗಳ ನಿಯಮ 9 ಓದಿಕೊಂಡಂತೆ ಅಧಿನಿಯಮದ ಪ್ರಕರಣ 13 (4) ರ ಅನ್ವಯ ಆತನಿಗೆ/ಆಕೆಗೆ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಹಿಸಿ, ಕೆಳ ಸಹಿದಾರರು ಕೆಳಗೆ ವಿವರಿಸಿರುವ ಸ್ವತ್ತನ್ನು **20.06.2026** ದಿನಾಂಕದಂದು ಸ್ವಾಧೀನಪಡಿಸಿಕೊಂಡಿರುತ್ತಾರೆ.
ಸದರಿ ವಾಹನಗಳ ಬಗ್ಗೆ ಯಾರೂ ವ್ಯವಹರಿಸಬಾರದಾಗಿ ಮತ್ತು ಸದರಿ ಸ್ವತ್ತುಗಳ ಬಗ್ಗೆ ಯಾವುದೇ ವ್ಯವಹಾರ ನಡೆಸಿದ್ದೇ ಆದರೆ ಅದು ಭಾರತೀಯ ಸ್ಟೇಟ್ ಬ್ಯಾಂಕ್, ಚಾಮುಂಡಿಪುರಂ ಶಾಖೆ (07346) ಮೈಸೂರುಗೆ ಬರಬೇಕಾಗಿರುವ ಕೆಳಕಂಡ ಮೊತ್ತ ಮತ್ತು ಇದರ ಮೇಲಿನ ಬಡ್ಡಿಯನ್ನು ಪಾವತಿಸುವುದಕ್ಕೆ ಒಳಪಟ್ಟಿರುತ್ತದೆ, ಎಂಬುದಾಗಿ ನಿರ್ದಿಷ್ಟವಾಗಿ ಸಾಲಗಾರರಿಗೆ / ಅಡಮಾನದಾರರಿಗೆ ಮತ್ತು ಸಾರ್ವಜನಿಕರಿಗೆ ಈ ಮೂಲಕ ಎಚ್ಚರಿಕೆ ನೀಡಲಾಗಿದೆ. ಇತರೆ ಬಾಕಿ ವೆಚ್ಚಗಳು ಪಾವತಿಸುವ ದಿನಾಂಕದವರೆಗೆ ಅನ್ವಯಿಸುತ್ತದೆ.
ಸಾಲಗಾರನ/ ಅಡಮಾನದಾರರಿಗೆ ಗಮನಕ್ಕೆ ತರುವುದೇನೆಂದರೆ ಭದ್ರತಾ ಸ್ವತ್ತುಗಳನ್ನು ಹಿಂಪಡೆಯುವ ಕಾಲಾವಕಾಶ ಕಾಯಿದೆಯ ಸೆಕ್ಷನ್ 13 ರ ಉಪವಿಭಾಗ (8) ರ ಅನ್ವಯ ಇರುತ್ತದೆ

| ಕ್ರ ಸಂ | ಸಾಲಗಾರರ ಹೆಸರು ಮತ್ತು ವಿಳಾಸ | ಡಿಮ್ಯಾಂಡ್ ನೋಟಿಸ್ ದಿನಾಂಕ ಮತ್ತು ಬಾಕಿ ಇರುವ ಮೊತ್ತ | ಸ್ಥಿರಾಸ್ತಿಯ ವಿವರ |
|---|---|---|---|
| 1. | **ಖಾತೆ ನಂ.HBL-42394585464.** **ಶ್ರೀಮತಿ.ಪಸುನುರಿ ಸ್ವಾತಿ ಕೋಂ ಯಕಣ್ಣ.** ನಂ.203, ಗ್ರೌಂಡ್ ಫ್ಲೋರ್, ಕಲ್ಯಾಣ ನಗರ, ಫೇಸ್-3, ಮೊತಿ ನಗರ, ಈರಗಡ್ಡ, ರಿಷಿ ರೆಸಿಡೆನ್ಸಿ ಎದುರು, ಹೈದರಬಾದ್, ತೆಲಂಗಾಣ-500018. ಕಛೇರಿ ವಿಳಾಸ : ಟೆಕ್‌ಸ್ಕಿಲ್ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಸರ್ವೆ ನಂ.1050, ಪ್ಲಾಟ್ ನಂ.ಎಸ್-2, 505, 5ನೇ ಫ್ಲೋರ್, ಮಂಜೀರ ಟ್ರಿನಿಟಿ ಕಾರ್ಪೋರೇಟ್, ಜೆಎನ್‌ಟಿಯು ಹೈ-ಟೆಕ್ ಸಿಟಿ ರಸ್ತೆ, ಕೆಪಿಹೆಚ್‌ಬಿ 3ನೇ ಫೇಸ್, ಕುಕಟ್‌ಪಲ್ಲಿ, ಹೈದರಬಾದ್, ತೆಲಂಗಾಣ-500072.....ಸಾಲಗಾರರು. | **ಡಿಮ್ಯಾಂಡ್ ನೋಟೀಸ್ ದಿನಾಂಕ : 06.04.2026** **ರೂ.73,32,700/-** ಈಗ ಬಾಕಿ ಇರುವ ಮೊತ್ತ **ರೂ..74,42,051/-** + ತಗುಲುವ ಬಡ್ಡಿ ಮತ್ತು ಇತರೆ ಖರ್ಚು ವೆಚ್ಚಗಳು ಅನ್ವಯಿಸುತ್ತವೆ. | ಮೈಸೂರು ಜಿಲ್ಲೆ, ಮೈಸೂರು ಸಿಟಿ, ಖಿಲ್ಲೆ ಮೊಹಲ್ಲಾ, ನಾಚನಹಳ್ಳಿ, ಜೆ.ಪಿ ನಗರ, ಎ ಬ್ಲಾಕ್, 1ನೇ ಹಂತದಲ್ಲಿರುವ ಸಿಐಟಿಬಿ ಕಾರ್ಪೋರೇಷನ್ ಡೋರ್ ನಂ.27ರಲ್ಲಿ ನಿರ್ಮಿತವಾಗಿರುವ 'ಅಮ್ಮ ರೆಸಿಡೆನ್ಸಿ' ಎಂಬ ಅಪಾರ್ಟ್‌ಮೆಂಟ್‌ನ 3ನೇ ಮಹಡಿಯಲ್ಲಿರುವ ಸ್ವತ್ತಿನ ಫ್ಲಾಟ್ ನಂ.ಟಿ-002 ರ ವಿಸ್ತೀರ್ಣ : 1270 ಚದರ ಅಡಿಗಳು ಸೂಪರ್ ಬಿಲ್ಡಪ್ ಏರಿಯಾ ಮತ್ತು 363 ಚದರ ಅಡಿಗಳು ಅವಿಭಾಜಿತ ಜಾಗ ಜೊತೆ ಒಂದು ಕಾರ್ ಪಾರ್ಕಿಂಗ್. ಈ ಸ್ವತ್ತು ಶ್ರೀಮತಿ.ಪಸುನುರಿ ಸ್ವಾತಿ ಕೋಂ ಯಕಣ್ಣರವರಿಗೆ ಸೇರಿದೆ. ಪೂರ್ವಕ್ಕೆ : ಫ್ಲಾಟ್ ನಂ.ಟಿ-001. ಉತ್ತರಕ್ಕೆ : ಫ್ಲಾಟ್ ನಂ. ಟಿ-003, ಪಶ್ಚಿಮಕ್ಕೆ : ಲಾಬಿ, ದಕ್ಷಿಣಕ್ಕೆ : ಸ್ವತ್ತಿನ ನಂ.38. |

ಸ್ಥಳ : ಮೈಸೂರು.
ದಿನಾಂಕ : 20.06.2026.
ಸಹಿ/- ಅಧಿಕೃತ ಅಧಿಕಾರಿಗಳು
ಭಾರತೀಯ ಸ್ಟೇಟ್ ಬ್ಯಾಂಕ್, ಗೃಹ ಸಾಲ ಕೇಂದ್ರ, ಕುವೆಂಪುನಗರ, ಮೈಸೂರು-570023.



## ಬ್ಯಾಂಕ್ ಆಫ್ ಬರೋಡ

ಪ್ರಾದೇಶಿಕ ಕಛೇರಿ, ಬರೋಡಾ ಸೌಧ, ವಿಶ್ವಮಾನವ ಡಬಲ್ ರೋಡ್, ಸರಸ್ವತಿಪುರಂ, ಮೈಸೂರು

**ಇ-ಹರಾಜು ಮಾರಾಟ ಸೂಚನೆ "ಅನುಬಂಧ – IV-A [ನಿಯಮ 6(2) & 8 (6)]**

ಇ-ಹರಾಜು ಮಾರಾಟ ಪ್ರಕಟಣೆ ನಿಯಮ 6(2) & 8(6) ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002 ರ ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಸ್ಟ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002 ರಲ್ಲಿ ಸ್ಥಿರಾಸ್ತಿಗಳ ಹರಾಜು ಮಾರಾಟ.

ನಿರ್ದಿಷ್ಟವಾಗಿ ಸಾಲಗಾರರಿಗೆ ಮತ್ತು ಅಡಮಾನುದಾರರಿಗೆ / ಜಾಮೀನುದಾರರಿಗೆ ಹಾಗೂ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ ಸೆಕ್ಯೂರ್ಡ್ ಕ್ರೆಡಿಟರ್‌ಗೆ ಅಡಮಾನ / ಚಾರ್ಜ್ ಮಾಡಿರುವ ಈ ಕೆಳಗೆ ಸೂಚಿಸಿರುವ ಆಸ್ತಿಗಳ ಅಧಿಕೃತ ಅಧಿಕಾರಿ, ಬ್ಯಾಂಕ್ ಆಫ್ ಬರೋಡ, ಬೆಂಗಳೂರು ಇವರು ಸ್ವಾಧೀನಕ್ಕೆ ಪಡೆದುಕೊಂಡಿದ್ದು, **" ಎಲ್ಲಿ ಹೇಗಿದೆಯೋ ಹಾಗೇ" ಎಲ್ಲಿ ಏನಿದೆಯೋ ಹಾಗೇ ಆಧಾರದ ಮೇಲೆ"** ಮಾರಾಟ ಮಾಡಲಾಗುವುದು. ಸಾಲಗಾರರ / ಜಾಮಿನುದಾರರ /ಅಡಮಾನದಾರರ ಆಸ್ತಿಯ ವಿವರ / ಬಾಕಿ ಮೊತ್ತ / ಮೀಸಲು ಬೆಲೆ / ಹರಾಜಿನ ದಿನಾಂಕ ಮತ್ತು ಸಮಯ, ಇಎಂಡಿ ಮತ್ತು ಬಿಡ್ ಗುಣಾಂಕಗಳನ್ನು ಕೆಳಗೆ ವಿವರಿಸಿದೆ.

| ಕ್ರ ಸಂ | ಸಾಲಗಾರರ / ಜಾಮೀನುದಾರರ / ಅಡಮಾನುದಾರ ಹೆಸರು & ವಿಳಾಸ | ತಿಳಿದಿರುವ ನಿರ್ಬಂಧಗಳೊಂದಿಗೆ ಸ್ಥಿರ ಆಸ್ತಿಯ ಸಂಕ್ಷಿಪ್ತ ವಿವರಣೆ, ಋಣಭಾರಗಳು ಯಾವುದಾದರೂ ಬ್ಯಾಂಕಿಗೆ ತಿಳಿದಿದ್ದಲ್ಲಿ | ಒಟ್ಟು ಬಾಕಿ ಮೊತ್ತ | ಇ-ಹರಾಜಿನ ದಿನಾಂಕ ಮತ್ತು ಸಮಯ | 1) ಮೀಸಲು ಬೆಲೆ, 2) ಇಎಂಡಿ, 3) ಬಿಡ್ ಗುಣಾಂಕ ಮೊತ್ತ, 4) ಸ್ವಾಧೀನದ ರೀತಿ | ಆಸ್ತಿ ಪರಿಶೀಲನೆ ದಿನಾಂಕ ಮತ್ತು ಸಮಯ. |
|---|---|---|---|---|---|---|
| | **ಕುವೆಂಪು ನಗರ ಶಾಖೆ** | | | | | |
| 1. | **ಶ್ರೀಮತಿ ಕಾವ್ಯಶ್ರೀ ಕೆ ಸಿ** ಕೋಂ ವಿನಯ್ ನಂ. ಟಿ 22, 3ನೇ ಕ್ರಾಸ್, ಯೂನಿವರ್ಸಿಟಿ ಕ್ವಾರ್ಟರ್ಸ್, ಮಾನಸ ಗಂಗೋತ್ರಿ, ಮೈಸೂರು-570006 | ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಸ್ವತ್ತಿನ ನಂ. 342/16, ಯೂನಿಕ್ ನಂ. 152200401145022051, ಸರ್ವೆ ನಂ. 96/6, ಈ ಆಸ್ತಿಯು "ಎಕ್ಸೋಟಿಕ್ ಫಾರ್ಮ್", ಗುಂಗ್ರಾಲ್ಛತ್ರ ಗ್ರಾಮ ಬಡಾವಣೆ, ಯಲವಾಲ ಹೋಬಳಿ, ಮೈಸೂರು ತಾಲ್ಲೂಕು -571130 ರಲ್ಲಿದ್ದು, ಆಸ್ತಿಯು ಶ್ರೀಮತಿ. ಕಾವ್ಯಶ್ರೀ ಕೆ.ಸಿ. ಕೋಂ ಜಿ.ವಿನಯ್ ರವರ ಹೆಸರಿನಲ್ಲಿದೆ. ಚಕ್ಕುಬಂದಿ : ಪೂರ್ವಕ್ಕೆ : ನಿವೇಶನ ನಂ. 15, ಪಶ್ಚಿಮಕ್ಕೆ : ನಿವೇಶನ ನಂ. 17, ಉತ್ತರಕ್ಕೆ : ರಸ್ತೆ, ದಕ್ಷಿಣಕ್ಕೆ : ಸರ್ವೆ ನಂ. 96/5. | ರೂ. **54,01,699.65** ಜೊತೆಗೆ ಭವಿಷ್ಯದ ಬಡ್ಡಿ ಮತ್ತು ಇತರೆ ಖರ್ಚು ವೆಚ್ಚಗಳು. | ದಿನಾಂಕ: **28.07.2026** ರಂದು ಮಧ್ಯಾಹ್ನ 2.00 ರಿಂದ ಸಂಜೆ 6.00 ಗಂಟೆಯವರೆಗೆ | ಮೀಸಲು ಬೆಲೆ : ರೂ. 29,00,000/- ಇಎಂಡಿ ಮೊತ್ತ: ರೂ.2,90,000/- ಬಿಡ್ ಗುಣಾಂಕದ ಮೊತ್ತ ರೂ.10,000/- 4) ಭೌತಿಕವಾಗಿ | ದಿನಾಂಕ **27.07.2026** ರಂದು ಸಂಜೆ 4.00 ಗಂಟೆಯವರೆಗೆ |
| | **ಎಸ್ ಆರ್ ರಸ್ತೆ ಶಾಖೆ** | | | | | |
| 2. | **ಶ್ರೀ. ರಫಿ ಉಲ್ಲಾ ಖಾನ್** ಬಿನ್ ಲೇಟ್ ಶ್ರೀ. ನಾಸೀರ್ ಖಾನ್, ಡಿ ನಂ. 2275, 2ನೇ ಹಂತ, ರಾಜೀವ್ ನಗರ, ಕೈಫ್ ಮಸೀದಿ ಹತ್ತಿರ, ದೇವನೂರು ಲೇಔಟ್, ಮೈಸೂರು, ಕರ್ನಾಟಕ-570019. | ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಸ್ವತ್ತಿನ ನಂ.05, ಆಸ್ತಿಯು ಮೈಸೂರು ಕಸಬಾ ಹೋಬಳಿ, ದೇವನೂರು ಗ್ರಾಮದ ಸರ್ವೆ ನಂ. 40 ರ ಹಂಚಿಕೆ ಭೂಮಿಯಲ್ಲಿ ರೂಪುಗೊಂಡಿದ್ದು, 'ಎಸ್ ಎ ಲೇಔಟ್' ನಲ್ಲಿದೆ. ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ : 15.00 ಮೀಟರ್‌ಗಳು, ಉತ್ತರದಿಂದ ದಕ್ಷಿಣಕ್ಕೆ : 9.00 ಮೀಟರ್‌ಗಳು, ಜೊತೆಗೆ ಒಟ್ಟು ನಿವೇಶನದ ವಿಸ್ತೀರ್ಣ 135.00 ಚದರ ಮೀಟರ್‌ಗಳು ಅಥವಾ 1452.60 ಚದರ ಅಡಿ ಜೊತೆಗೆ ನೆಲಮಹಡಿ, ಮೊದಲನೇ ಮಹಡಿ ಮತ್ತು ಎರಡನೇ ಮಹಡಿಗಳನ್ನೊಳಗೊಂಡಿರುವ ವಾಸಯೋಗ್ಯ ಮನೆಯ ವಿಸ್ತೀರ್ಣ ಬಿಲ್ಟ್ ಅಪ್ ಪ್ರದೇಶ 212.75 ಚದರ ಮೀಟರ್‌ಗಳು ಅಥವಾ 2289.19 ಚದರ ಅಡಿ ಈ ಆಸ್ತಿಯು ಎಸ್ ಎ ಲೇಔಟ್, ದೇವನೂರು ರಾಜೀವ್‌ನಗರ 2ನೇ ಹಂತ, ಎನ್.ಆರ್ ಮೊಹಲ್ಲಾ ಮೈಸೂರಿನಲ್ಲಿದೆ. ಆಸ್ತಿಯು ಶ್ರೀ. ರಫೀ ಉಲ್ಲಾ ಖಾನ್ ಬ